


ಎಂದೇನೊ ಪದೇಪದೆ ಹೇಳುತ್ತಿದ್ದೀರಂತೆ. ಹಿಂದೂಗಳು ಒಟ್ಟಾದರೆ ಸಾಕಾ? ಮುಸ್ಲಿಂ, ಕ್ರಿಶ್ಚಿಯನ್ನರು ಒಂದಾಗ್ಬಾರ್ದೇನ್ರಿ?' ಎಂದು ಎಲ್ಲರ ಮುಂದೆ ಮೊನಚಾಗಿ ಪ್ರಶ್ನಿಸಿದ್ದರು. 'ಸಮ್ಮಿಶ್ರ ಸರ್ಕಾರ ಕೆಡವಲು ವಿರೋಧ ಪಕ್ಷ ಸಂಚು ರೂಪಿಸುತ್ತಿರುವಾಗ ಇಷ್ಟು ಅಸೂಕ್ಷ್ಮವಾಗಿ ಮಾತಾಡಿದ್ರೆ ಹೇಗೆ? ಬೇರೆ ಧರ್ಮದ ಶಾಸಕರು ನಮ್ಮ ಪಕ್ಷದ ಆಧಾರ ಅಲ್ವೇನ್ರಿ?' ಎಂದು ಖಾರವಾಗಿ ಹೇಳಿದ್ದರು. ಈ ಅವಮಾನ, ಹೊಸ ರಾಜಕಾರಣದ ಅಲೆಯಿಂದ ನಾಯಕ್ ಅವರಲ್ಲಿದ್ದ ಅಸಮಾಧಾನದ ಕಿಡಿ ದಟ್ಟವಾಗುತ್ತಾ ಹೋಯಿತು.

ಗುಂಡು ಪಾರ್ಟಿಯಲ್ಲೊಮ್ಮೆ ಇದೇ ವಿಷಯವನ್ನು ಹೇಳಿ ನಾಯಕ್ ತಮ್ಮ ಪಕ್ಷಕ್ಕೆ ಮನಬಂದಂತೆ ಬಾಯಿಗೆ ತೋಚಿದ್ದೆಲ್ಲ ಬಡಬಡಿಸುವಾಗ ವಿರೋಧ ಪಕ್ಷದವರ ಕಿವಿ ಚುರುಕಾಗಿತ್ತು. ರಂಗಾ ನಾಯಕ್‌ರ ಈ ಅಸಮಾಧಾನವನ್ನು ಗುರುತಿಸಿದ ವಿರೋಧ ಪಕ್ಷದವರು ಆಪರೇಷನ್ ಗಾಳ ಬೀಸಿದ್ದರು. 'ಏನ್ರಿ, ನಿಮಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸ್ಥಾನ ತಾನೆ? ಅದೇನು ಮಾಡ್ತಿರೊ ಆ ಸ್ಥಾನ ಇಟ್ಕಂಡು' ಎಂದು ವಿರೋಧ ಪಕ್ಷದವರು ನಾಯಕ್‌ರ ಮನವೊಲಿಸಿದ್ದರು. ಸಚಿವ ಸ್ಥಾನದ ಜೊತೆ ಒಂದು ನಾಲ್ಕು ಸೈಟ್‌ಗಳು, ಹುಡುಗರಿಗೊಂದಿಷ್ಟು ಕಾಂಟ್ರಾಕ್ಟ್‌ಗಳು, ಕಾರ್ ಡಿಕ್ಕಿ ತುಂಬ ಹಣ ಎಲ್ಲಾ ನಾಯಕ್ ಕೈ ಸೇರಿತ್ತು.

ಹೊಸ ಸರ್ಕಾರ ರಚನೆಯಾಗಿ ಪ್ರಮಾಣವಚನ ಸ್ವೀಕರಿಸಿದ ರಾತ್ರಿ ಮಾಜಿ ಶಾಸಕ ರಾಮಾರೆಡ್ಡಿ ಫೋನ್ ಮಾಡಿ ಕುಡಿದ ಮತ್ತಿನಲ್ಲಿ ಬಾಯಿಗೆ ಬಂದಂತೆ ಮಾತನಾಡಿದ್ದ. 'ಕೇಳಿದ್ರೆ ಇನ್ನಷ್ಟು ಕೋಟಿ ಬಿಸಾಡ್ತಿದ್ದೆ ಸೂಳೆಮಗನೆ, ಎಲ್ಲಾ ಸಹಾಯ ಮರ್ತು ಬೆಂಕಿ ಹಚ್ಚೊ ಭಾಷಣ ಮಾಡೋರ ಎಂಜಲ ಕಾಸಿಗೆ ಕೈ ಹಾಕಿದ್ಯಲ್ಲ. ಹೆಸರು ಬಸರು ನಮ್ಮ ಪಕ್ಷದ್ದು, ನೆಕ್ಕಕ್ ಹೋಗಿದ್ದು ಅಲ್ಲಿಗೆ. ನಿನ್ನ ಮರ್ಯಾದೆ ಹರಾಜು ಹಾಕೋಕೆ ಬೇಕಾಗಿರೋ ಸಾಕ್ಷಿ ಎಲ್ಲಾ ನನ್ನ ಹತ್ರ ಇವೆ. ನಿನ್ನ ಜುಟ್ಟು ಜನಿವಾರ ಎರಡೂ ನನ್ನ ಕೈಯಲ್ಲಿದೆ' ಎಂದು ಗುಟುರು ಹಾಕಿದ್ದ.

ಸಮ್ಮಿಶ್ರ ಸರ್ಕಾರ ಕೆಡುವಾಗಿದ್ದ ಆಸಕ್ತಿ ನಾಯಕ್ ಅವರಿಗೆ ಹೊಸ ಸರ್ಕಾರ ರಚನೆಯಾಗಿ ಸಚಿವ ಸ್ಥಾನ ಸಿಕ್ಕ ಮೇಲೆ ಉಳಿದಿರಲಿಲ್ಲ. ಯಾವುದೋ ಸಂಘಟನೆಗಳ ಗಲಾಟೆ, ಸಂಚುಗಳು, ಲೆಕ್ಕಾಚಾರ ಹೊಂದಿಸುವುದು, ಪ್ರಶಸ್ತಿಗೆ ಬರುವ ಶಿಫಾರಸ್ಸುಗಳು, ಇಲಾಖೆಯ ಅಧಿಕಾರಿಗಳ ವರ್ಗಾವಣೆ, ಕೇಸುಗಳು, ಬೇನಾಮಿ ಆಸ್ತಿ ಇದೆಲ್ಲದರ ಉಸಾಬರಿ ಸಾಕಾಗಿ ಹೋಗಿತ್ತು. ಆ ಪಕ್ಷದಲ್ಲಿದ್ದಾಗ ಡೀಲ್‌ಗಳಿಗೆ 'ವೃತ್ತಿಪರ'ರ ಹತ್ತಿರ ಏಗುವುದು ಸುಲಭವಿತ್ತು. ಆದರೆ ಸಂಘಟನೆಗಳಿಟ್ಟುಕೊಂಡ ಯುವಕರ ಕೈಯಲ್ಲಿ ಕೆಲಸ ಸಾಧಿಸುವುದಂತೂ ರಾಜಕೀಯ ಬಗ್ಗೆ ರೇಜಿಗೆ ಹುಟ್ಟಿಸಿತ್ತು.

'ಡೀಲ್ ಗೀಲ್ ಅಂತೆಲ್ಲ ಯಾರ್ ಹತ್ರಾನು ಮಾಡ್ಬೇಡ. ಕಮಿಷನ್ ಮಾತು ಇನ್ನೆಂದೂ ಎತ್ತಕೂಡದು. ಇನ್ನು ಇದ್ದಷ್ಟು ದಿನ ಜನಸೇವೆ, ಸಾಹಿತ್ಯ ಅಂತ ಬರ್ಕೊಂಡು ಓದ್ಕೊಂಡು ಇದ್ಬಿಡ್ತೀನಿ' ಎಂದು ಪಿ.ಎ.ಗೆ ಹತ್ತಿರದ ಬಳಗಕ್ಕೆ ಖಡಾಖಂಡಿತವಾಗಿ ನಾಯಕ್ ಹೇಳಿದ್ದರು.

ರಾಜಕೀಯ ಚಟುವಟಿಕೆಗಳನ್ನು ಬಿಟ್ಟು ಸಚಿವರು ತಮ್ಮ ತೋಟದ ಮನೆಯಲ್ಲಿ ಕೂತು ಪುಸ್ತಕಗಳನ್ನು ಓದುವುದು, ಹಳೆಯ ಡೈರಿಗಳನ್ನು ಮಗುಚಿ ಹಾಕುವುದು, ರಾಜಕೀಯಕ್ಕೆ ಬಂದ ಮೇಲೆ ಭೇಟಿಯಾಗಲಾಗದ ಗೆಳೆಯರನ್ನು ಭೇಟಿಯಾಗುವುದು, ವೃದ್ಧಾಶ್ರಮ, ಅನಾಥಾಲಯಗಳಿಗೆ ಭೇಟಿ ನೀಡುವುದು, ಧ್ಯಾನ, ವ್ಯಾಯಾಮ, ರೈತರ ಭೇಟಿ, ಜನತಾದರ್ಶನದಲ್ಲಿ ಕಳೆಯತೊಡಗಿದರು. ಹಾಗಾಗಿ ಪಕ್ಷ ಸಂಘಟನೆಯಲ್ಲಿ, ಫಂಡಿಂಗ್ ಮಾಡುವಲ್ಲಿ ನಿಷ್ಕ್ರಿಯರಾಗಿ, ಸಂಘಟನೆ ಹುಡುಗರನ್ನು ಭೇಟಿಯಾಗದೆ ಹಿಂದುಳಿದರು. ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸಮಾಜ ಸೇವಕರಾಗಿ ಬದಲಾದಂತೆ ಕಾಣತೊಡಗಿದರು.

ಪಕ್ಷಾಂತರದಿಂದ ಹಳೆ ರಾಜಕೀಯ ಸ್ನೇಹಿತರನ್ನು ಕಳೆದುಕೊಂಡು ತಪ್ಪು ಮಾಡಿದೆ ಎಂದು ಕೊರಗಿದ್ದಿದೆ; ಹೊಸಬರೊಂದಿಗೆ ಬೆರೆಯಲಾರದೆ ಒದ್ದಾಡಿದ್ದಿದೆ. ರಾಮಾ ರೆಡ್ಡಿಯನ್ನು ಒಮ್ಮೆ ಭೇಟಿಯಾಗಿ ತೋಟದ ಮನೆಗೆ ಹೋಗಿ ತನ್ನ ರಾಶಿ ಪುಸ್ತಕಗಳನ್ನು, ಅಲ್ಲೇ ಬಿಟ್ಟಿದ್ದ ಡೈರಿಗಳನ್ನು ವಾಪಸ್ಸು ತರಬೇಕೆಂದು ಯೋಚಿಸಿದಾಗಲೆಲ್ಲ ರಾಮಾ ರೆಡ್ಡಿಯ ಮಾತುಗಳು ನೆನಪಾಗಿ ಸುಮ್ಮನಾಗುತ್ತಿದ್ದರು. ರಂಗಾ ನಾಯಕ್ ಮೇಲಿದ್ದ ಅಸಮಾಧಾನವನ್ನು ತೋರಿಸಲು ಹಳೆ ಪಕ್ಷದವರು ಸೋಷಿಯಲ್ ಮೀಡಿಯಾದಲ್ಲಿ 'ಅತೃಪ್ತ' ನಾಯಕ ಎಂದು ಕರೆಯುವಾಗ ರಂಗಾ ನಾಯಕ್ ಮನಸ್ಸಿಗೆ ಕಷ್ಟವಾಗುತ್ತಿತ್ತು. ಏನೂ ಬೇಡ ಎಂದು ಕೂತಿರುವಾಗ ತಿರುಗೇಟು ನೀಡುವ ಉಸಾಬರಿ ಏಕೆ ಎಂದು ಸುಮ್ಮನಾಗಿದ್ದರು.

ರಾತ್ರಿಯೆಲ್ಲ ಏನೇನೊ ಯೋಚನೆಗಳು ತಲೆ ಹೊಕ್ಕಿದ್ದರಿಂದ ಬೆಳಿಗ್ಗೆ ಅಸಮಾಧಾನದಿಂದ ಎದ್ದವರಿಗೆ ಪಿ.ಎ. ಪರಮೇಶಿ ಎದುರಾಗಿ, 'ಇವತ್ತಿನ ಮಹಿಳಾ ಸಂಘದ ಮೀಟಿಂಗ್ ಕ್ಯಾನ್ಸಲ್ ಮಾಡ್ಸಿದೀನಿ ಸರ್. ದರಿದ್ರ ರಾಜಕೀಯದವ್ರು, ಯಾರನ್ನು ನಂಬ ಹಂಗಿಲ್ಲ. ನೈತಿಕತೆ, ಸತ್ಯ, ಪ್ರಾಮಾಣಿಕತೆಗೆಲ್ಲ ಇಲ್ಲಿ ಬೆಲೆ ಇಲ್ಲ. ಬರಿ ದುಡ್ಡು. ಪಕ್ಷದ್ರೋಹ ಮಿತ್ರದ್ರೋಹ ಸಾಮಾನ್ಯ. ನೀವೇನ್ ತಲೆ ಕೆಡ್ಸ್ಕೊಬೇಡಿ, ನಾನ್ ಎಲ್ಲಾ ನೋಡ್ಕೊತೀನಿ'' ಎಂದು ಬಡಬಡಿಸಿದ.

ಪಿ.ಎ. ಪರಮೇಶಿ ಲೋಕಾಭಿರಾಮವಾಗಿ ಈ ಮಾತನ್ನು ಹೇಳಿದರೂ ನಾಯಕ್‌ರಿಗೆ ಈಟಿಯಂತೆ ಚುಚ್ಚಿದವು. ಅವನ ಮಾತಿನಿಂದ ಕಸಿವಿಸಿಯಾಗಿ, ಆತನ ಮಾತು ತನ್ನ ಕಿವಿಯ ಮೇಲೆ ಬಿದ್ದಿಲ್ಲ ಎನ್ನುವಂತೆ ಪೇಪರ್ ಓದಿನಲ್ಲಿ ಮಗ್ನರಾದಂತೆ ನಟಿಸತೊಡಗಿದರು.

'ಅದೇ ಮಾತಾಡ್ಬೇಕು ಅಂದಿದ್ರಲ್ಲ, ವರದಿಗಾರರ ಜೊತೆ. ನ್ಯೂಸ್ ಹೆಡ್ ಹೇಳಿದಾರೆ ಕಳಿಸ್ತೀನಿ ಅವ್ರನ್ನ ಅಂತ. 10.30ಕ್ಕೆ ಅಪಾಯಿಂಟ್ಮೆಂಟ್ ಕೊಟ್ಟಿದೀನಿ. 11ಕ್ಕೆ ನೀವು ಕೆಳಗ್ ಬನ್ನಿ ಸರ್' ಎಂದು ಫೈಲ್ ಹಿಡಿದು ಮೆಟ್ಟಲಿಳಿಯುತ್ತಾ ಹೋದ ಪರಮೇಶಿಯನ್ನು ಕಿರುಗಣ್ಣಿನಲ್ಲೇ ನೋಡಿ ಪೇಪರ್ ಬದಿಗೆಸೆದರು.

'ತಾನು ಪ್ರತಿಯೊಂದು ಹುಡುಗಿಯನ್ನು ಪ್ರೀತಿಸುವಾಗಲೂ ಅವಳೊಬ್ಬಳಿಗೆ ಮಾತ್ರ ನಿಷ್ಠನಾಗಿದ್ದೆ' ಎಂಬುದನ್ನು ನೆನಪಿಸಿಕೊಂಡ ನಾಯಕ್‌ರಿಗೆ, ಡೈರಿಯಲ್ಲಿರುವ ಅವರ ಹೆಸರುಗಳು ಚಾನೆಲ್ ಪರದೆಯ ಮುಂದೆ ಬರುವುದು ಇಷ್ಟವಿರಲಿಲ್ಲ. ಇಂದಿಗೂ ಒಳ್ಳೆಯ ಸ್ನೇಹಿತೆಯರಾಗಿರುವ ಅವರ ಬದುಕಲ್ಲಿ ಏಕಾಏಕಿ ಬಿರುಗಾಳಿಯೆಬ್ಬಿಸುವುದು ಕನಸಲ್ಲೂ ಊಹಿಸಲು ಸಾಧ್ಯವಿರಲಿಲ್ಲ.

ಕಾಲೇಜಿನ ದಿನಗಳ ಪ್ರತಿ ಪ್ರೇಮ ಪ್ರಸಂಗಗಳಿಗೆ ಒಂದು ಪಾವಿತ್ರ್ಯತೆ ಇದೆ ಎನಿಸುತ್ತಿತ್ತು. ತನ್ನನ್ನು ಬರೆಯಲು ಹಚ್ಚಿದ ಹುಡುಗಿಯ ಬಗ್ಗೆ ಅಗಾಧ ಒಲವಿತ್ತು. ತನ್ನ ಬದುಕಿನಲ್ಲಿ ಬಂದ ಪ್ರತಿಯೊಂದು ಹೆಣ್ಣಿಂದ ತಾನು ಕಲಿತ ನಡೆಗಳ ಬಗ್ಗೆ ಮೆಚ್ಚುಗೆಯಿತ್ತು.

ಬಂದಿದ್ದು ಬರಲಿ ಜಯಿಸೋಣ ಎಂಬ ಮನಸ್ಥಿತಿಯಲ್ಲಿ ನಾಯಕ್ ಇಲ್ಲವಾಗಿದ್ದರಿಂದ ಬ್ರೇಕಿಂಗ್ ನ್ಯೂಸ್ ಬಗ್ಗೆ ಅಧೀರರಾಗಿದ್ದರು. ಮುಂದಿನ ಚುನಾವಣೆಗೆ ನಿಲ್ಲುವುದು ಬೇಡ ಎಂಬ ಯೋಚನೆಯೂ ಮನಸ್ಸಲ್ಲಿ ಅನೇಕ ಬಾರಿ ಸುಳಿದಿತ್ತು. ಇರುವ ಮೂರು ವರ್ಷದ ಅಧಿಕಾರವನ್ನು ಮುಗಿಸಿಬಿಟ್ಟರೆ ಸಾಕು ಎಂಬ ಯೋಚನೆಯಲ್ಲಿದ್ದರು. ಈಗ ಇದೆಂತಹ ಸಂದಿಗ್ಧತೆ ಎಂದು, ಗಡಿಯಾರದ ಕಡೆ ಪದೇಪದೆ ನೋಡುತ್ತಾ ಸರಿಯಾಗಿ ತಿಂಡಿಯನ್ನು ತಿನ್ನದೆ ಬಾಲ್ಕನಿಗೆ ಹಾಜರಾಗಿದ್ದರು. ಶತಪಥ ತಿರುಗಿ, ಗೇಟಿನ ಕಡೆ ನೋಡಿ, ಸೋಫಾದ ಮೇಲೆ ಕುಸಿದು ಕುಳಿತರು.

ರಾತ್ರಿ ನಿದ್ರೆಯಿಲ್ಲದಕ್ಕೊ ಏನೋ ಕೂತಲ್ಲೇ ನಿದ್ರೆಗೆ